ಅ) ಹಾಗಿದ್ದಲ್ಲಿ ರಿಂಗ್ ರಸ್ತೆ, ಪೂರ್ಣಗೊಳಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಇ) ರಿಂಗ್ ರಸ್ತೆ ಕೆಲಸವನ್ನು ಖಾಸಗಿಯವರಿಗೆ ವಹಿಸಲಾಗುವುದೇ, ಈ ವಿಷಯದಲ್ಲಿ ತೆಗೆದು ಕೊಂಡ ಕ್ರಮಗಳೇನು ಹಾಗೂ ರಸ್ತೆ ಪೂರ್ಣಗೊಳಿಸಲು ಕಾಲಮಿತಿಯನ್ನು ಗೊತ್ತು ಪಡಿಸಲಾಗಿದೆಯೇ ?

ಶ್ರೀ. ಆರ್.ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ಸರ್ಕಾರಿ ಆದೇಶ ಸಂಖ್ಯೆ ಹೆಚ್ಯುಡಿ 20 ಎಂಎನ್‌ಜೆ 95 ದಿನಾಂಕ: 4-5-95ರಲ್ಲಿ ಹೊರವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ "ನಿರ್ಮಿಸಿ - ಹಸ್ತಾಂತರಿಸುವ" ಕರಾರಿನ ಮೇಲೆ ವಹಿಸಿಕೊಡಲು ಸರ್ಕಾರದ ಒಪ್ಪಿಗೆಯನ್ನು ನೀಡಲಾಗಿದೆ.

ಇ) ಮೇಲೆ ಸೂಚಿಸಿರುವ ಸರ್ಕಾರಿ ಆದೇಶದ ರೀತ್ಯಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಅರ್ಹರಾದಂಥ ಸಮಾಲೋಚಕರನ್ನು ವಿವರವಾದ ಯೋಜನಾ ವರದಿ ಮತ್ತು ಖಾಸಗಿ ಉದ್ದಿಮೆದಾರರ ಪೂರ್ವಾರ್ಹತೆಯ ಅರ್ಜಿಯನ್ನು ತಯಾರು ಮಾಡಲು ನೇಮಿಸಲಾಗಿದೆ. ಪೂರ್ವಾರ್ಹತೆಗಾಗಿ ಅರ್ಜಿಯನ್ನು ಸಲ್ಲಿಸಲು ಜನವರಿ 1996 ರಲ್ಲಿ ದೇಶಾದ್ಯಂತ ಪ್ರಸಾರವಾಗುವ ಪ್ರಸಿದ್ಧ ದಿನಪತ್ರಿಕೆಗಳಲ್ಲಿ ಅಧಿಸೂಚನೆಯನ್ನು ಕರೆಯಲಾಗಿದ್ದು, ಇದನ್ನು ಸ್ವೀಕರಿಸಿದ ನಂತರ ಪೂರ್ವಾರ್ಹತೆ ಹೊಂದಿದ ಅರ್ಜಿದಾರರಿಗೆ ಟೆಂಡರ್ ಪುಸ್ತಕಗಳನ್ನು ನೀಡಲಾಗುವುದು. ಪ್ರಸಕ್ತ ಅಂದಾಜಿನ ಆಧಾರದ ಮೇಲೆ ಈ ಕಾಮಗಾರಿಯು ಸೆಪ್ಟೆಂಬರ್-ಅಕ್ಟೋಬರ್ 1996ರಲ್ಲಿ ಪ್ರಾರಂಭಗೊಂಡು ಮೂರು ವರ್ಷಗಳ ನಂತರ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ.

## ಭದ್ರಾ ಜಲಾಶಯ ಯೋಜನೆಯ ಸಿಬ್ಬಂದಿ ಸಂಖ್ಯೆ

290 - ಶ್ರೀ ಹೆಚ್.ಎಸ್. ಶಿವಪ್ಪ (ಹರಿಹರ) ಮಾನ್ಯ ಭಾರಿ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಜಲಾಶಯದ ಯೋಜನೆಯಲ್ಲಿ (ಬಿ.ಆರ್. ಪ್ರಾಜೆಕ್ಟ್) ಕೆಲಸ ನಿರೀಕ್ಷಕರ ಹಾಗೂ ಸೌಡಿಗಳ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ, ಅವುಗಳ ಭರ್ತಿಪಡಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಭಾರಿ ನೀರಾವರಿ ರಾಜ್ಯ ಸಚಿವರು) :

ಅ) ಭದ್ರಾ ಜಲಾಶಯದ ಯೋಜನೆಯಡಿಯಲ್ಲಿನ ಕಾರ್ಯಾಲಯಗಳಿಗೆ ಕೆಲಸ ನಿರೀಕ್ಷಕರ ಹಾಗೂ ಸೌಡಿಗಳ ಮಂಜೂರಾತಿ ಹುದ್ದೆಗಳು ಇರುವುದಿಲ್ಲ. ಕಾರಣ ಖಾಲಿ ಹುದ್ದೆಗಳು ಇರುವುದಿಲ್ಲ.

ಅ) ಅದರೆ, ಕಾರ್ಯಭೃತ ಸಿಬ್ಬಂದಿ ಹಾಗೂ ದಿನಗೂಲಿಯಿಂದ ಕ್ರಮಬದ್ಧ ಸೇವೆಯಲ್ಲಿ ವಿಲೀನಗೊಂಡ ಸೂಪರ್ ಸ್ಯೂಮರರಿ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ 48 ಕೆಲಸ ನಿರೀಕ್ಷಕರು ಹಾಗೂ 285 ಸೌಡಿಗಳು, ಇದಲ್ಲದೇ, 44 ಲಿಟರೇಟ್ ಸಹಾಯಕರುಗಳು ಭದ್ರಾ ನಾಲಾ ಅಡಿಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

**ಬೆಂಗಳೂರು ನಗರದಲ್ಲಿ ವಾಹನಗಳ ಸುಲಲಿತ ಸಂಚಾರಕೆ ಕ್ಷಿಪ್ರ ಕಾರ್ಯ ಯೋಜನೆ.**

291 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಬೆಂಗಳೂರನಲ್ಲಿ ವಾಹನಗಳ ಸಂಚಾರವು ಸುಲಲಿತವಾಗಿರುವಂತೆ ಮಾಡಲು ಕ್ಷಿಪ್ರ ಕಾರ್ಯಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆಯೇ?*

*ಆ) ಹಾಗಿದ್ದಲ್ಲಿ, ಈ ಯೋಜನೆಯ ವಿವರಗಳೇನು?*

*ಇ) ಈ ಯೋಜನೆ ಯಾವ ಹಂತದಲ್ಲಿದೆ ಹಾಗೂ ಎಷ್ಟು ವರ್ಷಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.*

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ ರಾಜ್ಯ ಸಚಿವರು) :

ಅ) ಹೌದು

ಆ) ಬೆಂಗಳೂರು ನಗರದಲ್ಲಿ ಎತ್ತಿರಿಸಿದ ಹಗುರ ರೈಲು ಯೋಜನೆಯನ್ನು ಬೂಟ್ (ನಿರ್ಮಾಣ, ಒಡೆತನ, ಚಾಲನೆ, ಮತ್ತು ವರ್ಗಾವಣೆ) ಆಧಾರದ ಮೇಲೆ ಅಳವಡಿಸಲು ಉದ್ದೇಶಿಸಿದ್ದು ಈ ವ್ಯವಸ್ಥೆಯು 6 ಮಾರ್ಗಗಳನ್ನು ಹೊಂದಿದ್ದು ಒಟ್ಟು 90 ಕಿ.ಮೀ.ದೂರವನ್ನು ಒಳಗೊಂಡಿರುತ್ತದೆ ಹಾಗೂ ಈ ಯೋಜನೆಯ ಅಂದಾಜು ವೆಚ್ಚ ರೂ. 4000 (ನಾಲ್ಕು ಸಾವಿರ ಕೋಟಿ.ರೂ)

ಇ) ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಯುಡಿ 19 ಬಿಎಂಆರ್ 94 ದಿನಾಂಕ :31-1-96ರಂತೆ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಯು.ಬಿ. ಸಮೂಹ ಕಂಪನಿಯನ್ನು ಆಯ್ಕೆ ಮಾಡಲಾಗಿದೆ. ಈ ಕೆಲಸವು 1997ನೇ ಮಧ್ಯಭಾಗದಲ್ಲಿ ಪ್ರಾರಂಭಿಸಬೇಕಾಗಿದ್ದು 2006ನೇ ಇಸವಿಗೆ ಪೂರ್ಣಗೊಳಿಸುವ ಉದ್ದೇಶವಿದೆ.

**ಹೇಮಾವತಿ ನಾಲಾ ವಲಯ ಕೆಲಸದ ಕಾಮಗಾರಿ**

292 - ಶ್ರೀ ಎಸ್. ಶಿವಣ್ಣ (ತುಮಕೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹೇಮಾವತಿ ನಾಲಾ ಕಾಮಗಾರಿ ಕೆಲಸ ಸ್ಥಗಿತವಾಗಿದೆಯೇ, ಹಾಗಿದ್ದಲ್ಲಿ ಇದುವರೆವಿಗೂ ಪೂರ್ಣಗೊಂಡಿರುವ ಕಾಮಗಾರಿ ಎಷ್ಟು?*